ಹೃದಯಪೂರ್ಣನಾಗಿರುತ್ತಿದ್ದ. ಹಾಗಾಗದ್ದೆ ಈ ಅಗಲಿಕೆಗೆ ಕಾರಣವೇನೋ ಅನ್ನಿಸಿತು. ಈ ರಾಧೆ ಪರಿಪೂರ್ಣವಾಗಿ ಅವನಿಗೆ ಅರ್ಪಿತಳಾಗಿರಲಿಲ್ಲ. ಅದಕ್ಕೆಂದೆ ಅವನು ಹೇಳದೆಯೇ ಈ ಶಿಕ್ಷೆ ವಿಧಿಸಿದನೆ? 'ಮೇದು ಮನೆಗೆ ಬರಲು ಹೇಳಿದ್ದಾನೆ ರಾಧಾಕೃಷ್ಣ' ಅಂದನಲ್ಲವೆ? ಹಾಗಾದರೆ ಅದರ ಮರ್ಮ? ಚಿಂತಿಸಿ ಚಿಂತಿಸಿ ತಲೆ ಭಾರವಾಯಿತು. ಒಂದು ದಿನದ್ದಾಗಿರಲಿಲ್ಲ ಈ ಚಿಂತೆ.

ಅವನು ದಾಟಿ ಹೋದ ಊರುಬಾಗಿಲಾಚೆಯಿದ್ದ ಕರಿಗಲ್ಲಿನ ಮೇಲೆ ಕುಳಿತು ಯೋಚಿಸುತ್ತಿದ್ದೆ. ಇವಳನ್ನು ಅವನ ಮಂಕು ಕವಿದಿದೆಯೆಂದು ಜನ ಮಾತಾಡಿಕೊಳ್ಳುವಷ್ಟು ಚಿಂತೆ ಆವರಿಸಿತ್ತು.

ಒಂದು ದಿನ ಸಂಜೆ ದನಗಳನ್ನು ಮನೆಗೆ ಬಿಟ್ಟು ಹಿಂದಿರುಗಿ ನಾವು ಬಯಸಿ ಊರುತ್ತಿದ್ದ ಕಲ್ಲಿನ ಮೇಲೆ ಕುಳಿತು, ಅವನ ಅಗಲಿಕೆಯನ್ನು ನೆನೆದು ನೋಯುತ್ತಿದ್ದಾಗ, ಅವನಿರಬೇಕಿದ್ದಲ್ಲಿ ಇರುವವರತ್ತ ಚಿತ್ತ ಹರಿಯಿತು. ಅವರಾರೋ ಹಿಡಿದು ಹೊರಕ್ಕೆಳೆದರೆ ಯಾರೆಂದು ತಿಳಿದೀತು ಅಂದುಕೊಂಡು ಕಣ್ಣು ಮುಚ್ಚಿ ಒಳಗಣ್ಣವಳಾಗಿ ಹುಡುಕಿ ಹುಡುಕಿ ಕಡೆಗೆ ಹಿಡಿದು ಹೊರಕ್ಕೆಳೆದು ನಿಲ್ಲಿಸಿದೆ. ನಂಬಲಾಗಲಿಲ್ಲ. ಥೀ ರಂಡೆ ಎಂದೆ.

ನೀನು ಹುಟ್ಟಿದಂದಿನಿಂದ ಇದ್ದೇನೆ. ಇರದಿದ್ದರೆ ನೀನೆಲ್ಲಿ ಇರುತಿದ್ದೆ? ನಾನು, ನಾನು, ನಾನವನವಳು ಎಂದು ಮರೆಯುವ ಮೊದಲೇ ನೋಡಿಕೊಂಡಿದ್ದರೆ ಈ ಪಾಡು ಇರುತಿತ್ತೆ? ರಾಧೆ ಯಾರೆಂದು ಎಂದಾದರು ಕೇಳಿದ್ದರೆ ಹೇಳಿರುತ್ತಿದ್ದ. ಕೇಳುವ ವಿವೇಕ ನಿನಗೆಲ್ಲಿತ್ತು?

ಅವನು 'ರಾಧಾಕೃಷ್ಣ' ಅಂದಿದ್ದು ನಿನ್ನನ್ನು ಅಂದುಕೊಂಡೆಯ ಮರುಳೆ? ನನ್ನನ್ನು ಕಣೆ. ಇಷ್ಟಕ್ಕೂ ನೀನಾರೆ? ಒಬ್ಬ ಸಾಮಾನ್ಯ ಗೊಲ್ಲತಿ. ಎಲ್ಲಿಯ ನೀನು, ಎಲ್ಲಿಯವನು ಅವನು? ಅವನು ರಾಧೆಯನ್ನು ಬಲ್ಲವನು. ನಾನು ಕಣೆ ಆ ರಾಧೆ. ಹಾಗೆಂದೇ ಅವನು ಹೊರಡುವ ಮುನ್ನ ನನ್ನನ್ನು ಮನದುಂಬಿಕೊಂಡ. ಅವನನ್ನು ನಾನು ತುಂಬಿಕೊಂಡೆ. ಅವನನ್ನು ಅಗಲಿದೆ ಎಂಬ ಕೊರಗು ಗೊಲ್ಲತಿಯದು, ಈ ರಾಧೆಯದಲ್ಲ ಎಂದು ಕ್ಷಣವೂ ನಿಲ್ಲದೆ ಒಳಹೊಕ್ಕುಬಿಟ್ಟಳು.


## ಸ. ರಘುನಾಥ

ಕಾಯಂ ವಿಳಾಸವಿಲ್ಲದ ಸ. ರಘುನಾಥ ಅವರದು ಸಾವು ಗೆದ್ದ ಜೀವ. ರೈಲಿನ ಹಳಿಯ ಮೇಲೆ ಬಿದ್ದು ಸಾಯಲು ಹೋದ ಅವರನ್ನು ಸಾವು ಸಮೀಪಿಸಲಿಲ್ಲ; ಆದರೆ ಬದುಕಿನಿಡೀ ಒಂಟಿಗಾಲಿನ ಪಯಣಕ್ಕೆ ಹಚ್ಚಿತು. ದೀರ್ಘಕಾಲ ಪ್ರಾಥಮಿಕ ಶಾಲಾಶಿಕ್ಷಕರಾಗಿ ಸಾವಿರಾರು ವಿದ್ಯಾರ್ಥಿಗಳ ಬಾಳು ಬೆಳಗಿದ ಅವರು ಅದಕ್ಕಿಂತಲೂ ಮಿಗಿಲಾಗಿ ನೊಂದ, ಅನಾಥ, ಭಿಕ್ಷುಕ, ವೃದ್ಧ, ಅಂಗವಿಕಲ ಜೀವಿಗಳಿಗೆ ಬದುಕು ಕೊಟ್ಟವರು. 1982ರಿಂದ ಗೌನಿಪಲ್ಲಿಯಲ್ಲಿ 'ಬೀದಿ ಬದಿಯ ಮಕ್ಕಳು' ಎಂಬ ಹೆಸರಿನಲ್ಲಿ ಆರಂಭವಾದ ಈ ಜೀವದಾಯಿ ಸೇವೆ ಬಳಿಕ 'ನಮ್ಮ ಮಕ್ಕಳು' ಎಂಬ ಹೆಸರಿನಲ್ಲಿ ಕೆಲಸ ಮಾಡುತ್ತಿದೆ.

ಎಂಟು ಕವನ ಸಂಕಲನಗಳನ್ನು, ಮೂರು ಕಥಾಸಂಲನಗಳನ್ನು, ಮೂರು ವಿಮರ್ಶಾ ಕೃತಿಗಳನ್ನು, ಮೂರು ಶಿಶುಸಾಹಿತ್ಯ ಕೃತಿಗಳನ್ನು ಪ್ರಕಟಿಸಿದ್ದಾರೆ. ಕನ್ನಡದಿಂದ ತೆಲುಗಿಗೆ ಐದು ಕೃತಿಗಳನ್ನು, ತೆಲುಗಿನಿಂದ ಕನ್ನಡಕ್ಕೆ 15 ಕೃತಿಗಳನ್ನು ಅನುವಾದಿಸಿರುವ ಅವರು ಜಾನಪದ, ಸಂಪಾದನೆ, ಅಂಕಣಬರಹ ಮೊದಲಾದ ಕ್ಷೇತ್ರಗಳಲ್ಲೂ ಕೆಲಸ ಮಾಡಿದ್ದಾರೆ. ಕನಕದಾಸರ ಸಮಗ್ರ ಸಾಹಿತ್ಯ ಅನುವಾದ ಯೋಜನೆಯ ತೆಲುಗು ಆವೃತ್ತಿಯ ಸಂಪಾದಕರು.